ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀಮತಿ ಹೇಮಲತಾ ನಾಯಕ್,
ಶ್ರೀ ಕೇಶವ ಪ್ರಸಾದ್ ಎಸ್ ರವರುಗಳು
ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ

ವಿಷಯ : ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯು ಸಂಪೂರ್ಣವಾಗಿ ಸರ್ಕಾರದ ಹದ್ದುಬಸ್ತಿನಿಂದ ತಪ್ಪಿಹೋಗಿದ್ದು, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದರಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲರಾಗಿರುವುದು ಶೋಚನೀಯ ಹಾಗೂ ಅಮಾನವೀಯ. ಸಮಾಜದಲ್ಲಿ ಎಲ್ಲಾ ತರನಾದ ದಂದೆಗಳು, ಕೊಲೆಗಳು, ಅಮಾನುಷ ಕೃತ್ಯಗಳು, ದೌರ್ಜನ್ಯಗಳು, ದುರ್ನಡತೆಗಳು, ಅಸ್ವಾಭಾವಿಕವಾದಂತಹ ಪ್ರವೃತ್ತಿಗಳು, ದೇಶದ್ರೋಹದ ಹೇಳಿಕೆಗಳು, ಧರ್ಮಾಧಾರಿತ ಘಟನೆಗಳು ಮತ್ತು ಮಹಿಳೆಯರ, ಅಬಲರ, ವೃದ್ಧೆಯರ ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ಹೇಯ ಕೃತ್ಯಗಳನ್ನು ನಿಲ್ಲಿಸುವಲ್ಲಿ & ನಿಭಾಯಿಸುವಲ್ಲಿ ಸರ್ಕಾರವು ಏಕೆ ಮುಂದಾಗುತ್ತಿಲ್ಲ? ಅಪರಾಧ ಎಸಗಿದ ಸಮಾಜಘಾತುಕರನ್ನ ಹಿಡಿದು ಶಿಕ್ಷಿಸುವಲ್ಲಿ ನಿಧಾನಗತಿಯ ಧೋರಣೆಯನ್ನು ರಾಜ್ಯ ಸರ್ಕಾರವು ತೋರುತ್ತಿದೆ. ಇದೇ ಪರಿಸ್ಥಿತಿ ಮುಂದುವರೆದಲ್ಲಿ ರಾಜ್ಯವು ಲಾ-ಲೆಸ್ (ಕಾನೂನು ಇಲ್ಲದ) ರಾಜ್ಯವಾಗುವುದರಲ್ಲಿ ಸಂಶಯವೇ ಇಲ್ಲ ಎಂಬುದರ ಕುರಿತು.

ಉತ್ತರ: ರಾಜ್ಯದಲ್ಲಿ ಕಳೆದ ಐದು ವರ್ಷದಿಂದ ನಡೆದಿರುವ ಅಪರಾಧ ಪ್ರಕರಣಗಳ ಮಾಹಿತಿ ಕೆಳಗಿನಂತಿರುತ್ತದೆ:-

| ಕ್ರ ಸ | ಪ್ರಕರಣ | 2020ನೇ ಸಾಲಿನ ಪ್ರಕರಣಗಳ ಸಂಖ್ಯೆ | 2021ನೇ ಸಾಲಿನ ಪ್ರಕರಣಗಳ ಸಂಖ್ಯೆ | 2022ನೇ ಸಾಲಿನ ಪ್ರಕರಣಗಳ ಸಂಖ್ಯೆ | 2023ನೇ ಸಾಲಿನ ಪ್ರಕರಣಗಳ ಸಂಖ್ಯೆ | 2024ನೇ ಸಾಲಿನ ಪ್ರಕರಣಗಳ ಸಂಖ್ಯೆ 30.11.2024 ರವರೆಗೆ |
|---|---|---|---|---|---|---|
| 1 | ಕೊಲೆ ಪ್ರಕರಣ | 1316 | 1341 | 1368 | 1296 | 1102 |
| 2 | ಪೋಕ್ಸೊ ಪ್ರಕರಣ | 2165 | 2884 | 3208 | 3863 | 3576 |
| 3 | ಅತ್ಯಾಚಾರ ಪ್ರಕರಣ | 479 | 556 | 537 | 607 | 578 |
| 4 | ಹಲ್ಲೆ ಪ್ರಕರಣ | 13641 | 13339 | 15379 | 17418 | 15645 |
| 5 | ಎನ್‌ಡಿಪಿಎಸ್ ಪ್ರಕರಣ | 4066 | 5789 | 6406 | 6764 | 3503 |
| 6 | ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ | 4547 | 4917 | 5857 | 6493 | 5871 |
| 7 | ವಂಚನೆ | 4352 | 5428 | 6414 | 6932 | 5998 |
| 8 | ರಾಬರಿ ಪ್ರಕರಣ | 858 | 978 | 1066 | 1883 | 942 |
| 9 | ಡಕಾಯಿತಿ ಪ್ರಕರಣ | 186 | 179 | 216 | 315 | 141 |
| 10 | ಗಲಭೆ ಪ್ರಕರಣ | 4365 | 3977 | 3928 | 3903 | 3167 |

ಕೊಲೆ, ರಾಬರಿ, ಡಕಾಯಿತಿ, ಕಳೆದ ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಗಮನಾರ್ಹ ಇಳಿಕೆ ಕಂಡುಬರುತ್ತದೆ.

**ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪೊಲೀಸ್ ಇಲಾಖೆಯು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಂಡಿದೆ:-**

- ಕೊಲೆ ಪ್ರಕರಣಗಳು ವ್ಯಕ್ತಿಗಳ / ಗುಂಪುಗಳ ಮಧ್ಯದ ವೈಯಕ್ತಿಕ ದ್ವೇಷ ಮತ್ತು ಪ್ರತೀಕಾರದಿಂದ ಸಂಭವಿಸಬಹುದಾಗಿರುತ್ತವೆ. ಆದ್ದರಿಂದ ಈ ರೀತಿಯ ಮಾಹಿತಿ ದೊರೆತ ಕೂಡಲೇ ಪೊಲೀಸರು ಸೂಕ್ತ ಕ್ರಮಕೈಗೊಂಡು ಕೊಲೆ / ಹತ್ಯೆ ಘಟನೆಗಳು ಜರುಗದಂತೆ ನೋಡಿಕೊಳ್ಳಲಾಗುತ್ತಿದೆ.
- ಬಹಳಷ್ಟು ಪ್ರಕರಣಗಳಲ್ಲಿ ದೂರು ಮತ್ತು ಪ್ರತಿ ದೂರು ಬಂದಂತಹ ಸಂದರ್ಭದಲ್ಲಿ ಎರಡು ದೂರುದಾರರು ಮತ್ತು ಪ್ರತಿ ದೂರುದಾರರಿಗೆ ತಿಳುವಳಿಕೆ ನೀಡಿ, ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಪಿಎಆರ್ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.
- ಯಾವುದೇ ರೀತಿಯ ದೂರು ಬಂದಾಗಲೂ ಸಹ, ದೂರನ್ನು ಕೂಲಂಕಷವಾಗಿ ಪರಿಶೀಲಿಸಿ ಪೊಲೀಸ್ ಠಾಣೆಯ ದಾಖಲಾತಿಯಲ್ಲಿ ನಮೂದಿಸಿ ಕ್ರಮಕೈಗೊಳ್ಳಲಾಗುತ್ತಿದೆ.
- ಸಮಾಜದಲ್ಲಿ ಅಶಾಂತಿ ತೋರಿದ ವ್ಯಕ್ತಿಗಳನ್ನು ಕಾನೂನಿನ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಸಮಾಜದಲ್ಲಿ ಶಾಂತಿ ಕಾಪಾಡುವಂತೆ ಬಾಂಡ್‌ಗಳನ್ನು ಬರೆಸಿಕೊಳ್ಳಲಾಗುತ್ತಿದೆ. ಹಾಗೂ ಕೆಲವೊಂದು ಪ್ರಕರಣಗಳಲ್ಲಿ ಸಮಾಜಕ್ಕೆ ಅಶಾಂತಿ ತರುವಂತಹ ವ್ಯಕ್ತಿಗಳನ್ನು ಗಡಿಪಾರು ಮಾಡಲು ಹಾಗೂ ಗೂಂಡಾ ಕಾಯ್ದೆಯಡಿಯಲ್ಲಿ ಕ್ರಮಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.
- ಯಾವುದೇ ರೀತಿಯ ಘಟನೆಗಳು ಜರುಗುವ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಘಟನಾ ಸ್ಥಳಕ್ಕೆ ಪೊಲೀಸರು ಅಧಿಕಾರಿಗಳು ತಲುಪುವ ಸಂಬಂಧ ಕರ್ನಾಟಕ ರಾಜ್ಯದಲ್ಲಿ ಇ.ಆರ್.ಎಸ್.ಎಸ್. (112) ವ್ಯವಸ್ಥೆಯನ್ನು ನಿರ್ವಹಿಸಲಾಗುತ್ತಿದೆ.
- ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಪಿಂಕ್ ಹೊಯ್ಸಳ, ಮಹಿಳಾ ಠಾಣೆ, ಮಹಿಳಾ ವಿಶೇಷ ಪೊಲೀಸ್ ಪಡೆಗಳನ್ನು ಸ್ಥಾಪಿಸಲಾಗಿರುತ್ತದೆ.
- ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲ ಮೀಟಿಂಗ್, ನಾಗರೀಕ ಸಮಿತಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ.
- ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ಸಾಮಾಜಿಕ ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗಿದೆ. ಸಾಮಾಜಿಕ ಜಾಲತಾಣಗಳ ನಿಗಾ ಘಟಕಗಳನ್ನು ಪೊಲೀಸ್ ಠಾಣಾ ಮಟ್ಟಕ್ಕೂ ವಿಸ್ತರಿಸಲಾಗಿದೆ.
- ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಬೀಟ್ ಮತ್ತು ಗುಡ್ ಮಾರ್ನಿಂಗ್ ಬೀಟುಗಳನ್ನು ಕೈಗೊಳ್ಳಲಾಗಿದೆ. ಏಕ ಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗುತ್ತಿದ್ದು, ಕಾನೂನು ಉಲ್ಲಂಘಿಸಿದವರ ಮೇಲೆ ಕ್ರಮ ಜರುಗಿಸಲಾಗುತ್ತಿದೆ.
- ಪ್ರಮುಖ ಹಬ್ಬದ ಆಚರಣೆಗಳ ಸಂದರ್ಭದಲ್ಲಿ ಎಲ್ಲಾ ಸಮುದಾಯಗಳ ಮುಖಂಡರುಗಳನ್ನು ಒಳಗೊಂಡ ಶಾಂತಿ ಸಭೆಗಳನ್ನು ಜಿಲ್ಲಾ ಮಟ್ಟದಲ್ಲಿ, ಉಪ-ವಿಭಾಗದ ಮಟ್ಟದಲ್ಲಿ ಮತ್ತು ಪೊಲೀಸ್ ಠಾಣೆ ಮಟ್ಟದಲ್ಲಿ ನಡೆಸಲಾಗುತ್ತಿದೆ.
- ಗಲಭೆ ಪ್ರಕರಣಗಳಲ್ಲಿ ಭಾಗಿಯಾಗುವ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ರೀತ್ಯಾ ಕ್ರಮಗಳನ್ನು ಜರುಗಿಸಲಾಗುತ್ತಿರುತ್ತದೆ.
- ಗುಪ್ತ ಮಾಹಿತಿ ಸಿಬ್ಬಂದಿ ಹಾಗು ಬೀಟ್ ಸಿಬ್ಬಂದಿಯವರ ಮೂಲಕ ಮುಂಗಡವಾಗಿ ಮಾಹಿತಿಯನ್ನು ಸಂಗ್ರಹಿಸಿ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಸೂಕ್ತ ಕ್ರಮ ಕೈಕೊಳ್ಳಲಾಗುತ್ತಿದೆ.
- ದಿನದ 24 ಗಂಟೆಗಳ ಕಾಲ ಗಸ್ತು ಕರ್ತವ್ಯಕ್ಕಾಗಿ ಶಕ್ತಿ ಪೆಟ್ರೋಲಿಂಗ್, ಹೊಯ್ಸಳ ವಾಹನ ನಿಯಮಿತವಾಗಿ ನಿಯೋಜಿಸಲಾಗಿ, ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವಂತಹ ರೌಡಿಗಳಿಗೆ ಕಠಿಣವಾದ ಎಚ್ಚರಿಕೆಗಳನ್ನು

ನೀಡಿ, ಯಾವುದೇ ಕೃತ್ಯಗಳನ್ನು ಮಾಡಿದಾಗ ಅವರ ಮೇಲೆ ಆಗುವ ಪರಿಣಾಮಗಳ ಗಂಭೀರತೆಯ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡಲಾಗಿರುತ್ತದೆ.

- ಸಾಮಾಜಿಕ ಜಾಲ ತಾಣಗಳಲ್ಲಿ ಕೋಮು ಸೌಹಾರ್ದತೆ ಕದಡುವ ವ್ಯಕ್ತಿಗಳನ್ನು ಗುರುತಿಸಿ ಅಂಥಹವರ ಮೇಲೆ ನಿಗಾ ಇಡಲಾಗುತ್ತಿದೆ.

**ಅಪರಾಧಗಳನ್ನು ತಡೆಗಟ್ಟುವಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-**

- ಡಿ.ಜಿ. ಮತ್ತು ಐಜಿಪಿ ರವರ ಸುತ್ತೋಲೆ ಸಂಖ್ಯೆ: L&O/Misc/206/2017 ದಿನಾಂಕ: 03.03.2017ರ ಆದೇಶದಂತೆ ಪ್ರತಿ ಮಾಹೆ ಠಾಣಾಧಿಕಾರಿಗಳು ತಮ್ಮ ಠಾಣಾ ವ್ಯಾಪ್ತಿಯಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ, ಮಾದಕ ವಸ್ತುಗಳ ದುಷ್ಪರಿಣಾಮಗಳಿಂದಾಗುವ ಅನಾಹುತಕ್ಕೆ ಸಂಬಂಧಪಟ್ಟಂತೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಹಾಗೂ ಶಾಲಾ ಕಾಲೇಜುಗಳ ಸುತ್ತಮುತ್ತ 100 ಯಾರ್ಡ್‌ಗಳ ಅಂತರದಲ್ಲಿ ಯಾವುದೇ ಮಾದಕ ವಸ್ತುಗಳನ್ನು ಮಾರಾಟ ಮಾಡದಂತೆ ಬೋರ್ಡ್‌ಗಳನ್ನು ಅಳವಡಿಸಿದ್ದು ಈಗಾಗಲೇ ಕೋಟ್ಪಾ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುತ್ತಿದೆ

- ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ, ಸೈಬರ್ ಕ್ರೈಂ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಸೈಬರ್ ಕ್ರೈಂ ಬಗ್ಗೆ ಬೀದಿ ನಾಟಕಗಳು, ಸೈಕಲ್ ಜಾಥ ಮಾಡುವುದು ಹಾಗೂ ಫೇಸ್ ಬುಕ್ ನಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.

- ಅಪರಾಧ ತಡೆಗಟ್ಟುವ ಸಂಬಂಧ ಮೈಸೂರು ನಗರ ಪೊಲೀಸ್ ಘಟಕದಲ್ಲಿ ಈಗಾಗಲೇ ನ್ಯೂ ಬೀಟ್ ವ್ಯವಸ್ಥೆ ಚಾಲ್ತಿಯಲ್ಲಿದ್ದು, ಪ್ರತೀ ತಿಂಗಳು 02 ಮೊಹಲ್ಲಾ ಸಭೆ ಮಾಡಲಾಗುತ್ತಿದೆ.

- ನಾಗರೀಕ ಸಲಹಾ ಸಮಿತಿ ಮತ್ತು ಪರಿಶಿಷ್ಟ ಜಾತಿ ಪಂಗಡದ ಸಭೆಗಳಲ್ಲಿ ಅಪರಾಧ ತಡೆಗಟ್ಟುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಹಾಗೂ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಕಾರ್ಯಗಾರ ನಡೆಸಿ ಅಪರಾಧ ತಡೆಗಟ್ಟುವ ಬಗ್ಗೆ ತಿಳಿಸಿಕೊಡಲಾಗುತ್ತಿದೆ.

- ಪ್ರತಿ ವರ್ಷ ಅಪರಾಧ ತಡೆ ಮಾಸಾಚಾರಣೆ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅಪರಾಧಗಳ ಕುರಿತು ಅರಿವು ಮೂಡಿಸಲಾಗುತ್ತಿದೆ.

- ಬೀಟ್ ಸಿಬ್ಬಂದಿಗಳಿಂದ ಗುಪ್ತಚರ ಮಾಹಿತಿ ಕಲೆಹಾಕಿ ಅಪರಾಧಗಳನ್ನು ನಿಯಂತ್ರಿಸಲು ಕ್ರಮಕೈಗೊಳ್ಳಲಾಗುತ್ತಿದೆ.

- ಇ.ಆರ್.ಎಸ್.ಎಸ್. 112 ಮೂಲಕ ಮಾಹಿತಿ ಕಲೆಹಾಕಿ ಅಪರಾಧಗಳನ್ನು ನಿಯಂತ್ರಿಸಲು ಕ್ರಮಕೈಗೊಳ್ಳಲಾಗುತ್ತಿದೆ.

- ಹಗಲು, ರಾತ್ರಿ ಹಾಗೂ ಪೆಟ್ರೋಲಿಂಗ್ ಮೂಲಕ ಮಾಹಿತಿ ಸಂಗ್ರಹಿಸಿ ಕ್ರಮಕೈಗೊಳ್ಳಲಾಗುತ್ತಿದೆ.

- ಪ್ರತೀ ಮಾಹೆ ಶಾಂತಿ ಸಭೆ, ಯುವಜನ ಸಭೆ, ಜನಸಂಪರ್ಕ ಸಭೆ ಹಾಗೂ ಮೊಹಲ್ಲಾ ಸಭೆಗಳನ್ನು ಏರ್ಪಡಿಸಿ ಅಪರಾಧಗಳನ್ನು ತಡೆಗಟ್ಟಲು ಕ್ರಮಕೈಗೊಳ್ಳಲಾಗುತ್ತಿದೆ.

- ಮುಂಜಾಗ್ರತಾ ಕ್ರಮವಾಗಿ ರೌಡಿ ಹಾಳೆ/ಗೂಂಡಾ ಕಾಯ್ದೆ ಮೂಲಕ ಆರೋಪಿಗಳ ವಿರುದ್ಧ ಕ್ರಮಕೈಗೊಳ್ಳಲಾಗುತ್ತಿದೆ.

- ಭದ್ರತಾ ಪ್ರಕರಣಗಳನ್ನು ದಾಖಲಿಸಿ ಕಾನೂನು ಸುವ್ಯವಸ್ಥೆಯನ್ನು ಹದಗೆಡದಂತೆ ಕ್ರಮಕೈಗೊಳ್ಳಲಾಗಿದೆ.

- ಅಪರಾಧ ನಿಯಂತ್ರಣ ಸಂಬಂಧ ಪಬ್ಲಿಕ್ ಸೇಫ್ಟಿ ಆಕ್ಟ್ ರೀತ್ಯ ಸಿ.ಸಿ ಕ್ಯಾಮರಾಗಳನ್ನು ಅಳವಡಿಸಿ ಅಪರಾಧ ನಿಯಂತ್ರಣಕ್ಕೆ ಕ್ರಮಕೈಗೊಳ್ಳಲಾಗಿದೆ.
- ರಾತ್ರಿ ಗಸ್ತಿನ ಸಂದರ್ಭದಲ್ಲಿ ನಿಯೋಜಿಸಲಾದ ಸಿಬ್ಬಂದಿಗಳಿಂದ ಸಿ.ಸಿ.ಟಿ.ಎನ್.ಎಸ್. ಆಪ್ ಮೂಲಕ ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಅಂತಹವರನ್ನು ಚೆಕ್ ಮಾಡಿ ಕ್ರಮಕೈಗೊಳ್ಳಲಾಗುತ್ತಿದೆ.
- ಸಾರ್ವಜನಿಕರು ದೂರು ನೀಡಿದ ತಕ್ಷಣ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗುತ್ತಿರುತ್ತದೆ.

**ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ ಈ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ:-**

- ಬೆಂಗಳೂರು ನಗರದಲ್ಲಿ ಮಹಿಳೆಯರ ರಕ್ಷಣೆಗಾಗಿ, ಮಹಿಳಾ ಸಹಾಯವಾಣಿ 1091 ಮತ್ತು ವನಿತಾ ಸಹಾಯವಾಣಿ 22943225 ಕಾರ್ಯ ನಿರ್ವಹಿಸುತ್ತಿರುತ್ತದೆ.
- ದಿನದ 24 ಗಂಟೆಯೂ ಸಹ ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗಾಗಿ "ಪಿಂಕ್ ಹೊಯ್ಸಳ" ಮತ್ತು 112 ಗಸ್ತುವಾಹನಗಳು ಗಸ್ತು ಕಾರ್ಯ ನಿರ್ವಹಿಸುತ್ತಿವೆ.
- ರಾಜ್ಯದ ಬೆಂಗಳೂರು ನಗರದಲ್ಲಿ ರಾಣಿ ಚೆನ್ನಮ್ಮ ಪಡೆ ಇತರೆ ಜಿಲ್ಲೆಗಳಾದ ಬಾಗಲಕೋಟೆ ಜಿಲ್ಲೆಯಲ್ಲಿ ಚನ್ನಮ್ಮ ಪಡೆ, ಬಳ್ಳಾರಿ ಜಿಲ್ಲೆಯಲ್ಲಿ ಓಬವ್ವ ಪಡೆ, ದಾವಣಗೆರೆ ಜಿಲ್ಲೆಯಲ್ಲಿ ದುರ್ಗಾ ಪಡೆ, ಗದಗ ಜಿಲ್ಲೆಯಲ್ಲಿ ಚೆನ್ನಮ್ಮ ಪಡೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಶರಾವತಿ ಓಬ್ಬವ್ವ ಪಡೆ, ಬೀದರ್ ಜಿಲ್ಲೆಯಲ್ಲಿ ರಾಣಿ ಚನ್ನಮ್ಮ ಪಡೆ ವಾಹನವು ಹೆಚ್ಚಾಗಿ ಮಹಿಳೆಯರು ಓಡಾಡುವ ಜನನಿಬಿಡ ಸ್ಥಳಗಳಲ್ಲಿ ಹಾಗೂ ಶಾಲಾ ಕಾಲೇಜುಗಳ ಬಳಿ ಹೆಚ್ಚಿನ ಗಸ್ತು ಕಾರ್ಯವನ್ನು ನಿರ್ವಹಿಸುತ್ತಿರುತ್ತದೆ.
- ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಬೆಂಗಳೂರು ನಗರದಲ್ಲಿ "ವೀರವನಿತೆ" ತಂಡವನ್ನು ರಚಿಸಿ, ಸದರಿಯವರಿಗೆ 6 ತಿಂಗಳು ನುರಿತ ತಜ್ಞರಲ್ಲಿ ಸ್ವಯಂ ರಕ್ಷಣೆ ಮತ್ತು ಮಾರ್ಷಿಯಲ್ ಆರ್ಟ್ಸ್ ಬಗ್ಗೆ ತರಬೇತಿ ನೀಡಿ, ನಂತರ ಸದರಿಯವರುಗಳನ್ನು 3 ತಂಡಗಳನ್ನಾಗಿ ರಚಿಸಿ ಮೇಲಾಧಿಕಾರಿಗಳ ನೇತೃತ್ವದಲ್ಲಿ ನಗರದ ವಿವಿಧ ಶಾಲಾ-ಕಾಲೇಜುಗಳು ಮತ್ತು ಮಹಿಳೆಯರು ಹೆಚ್ಚಾಗಿ ಕೆಲಸ ನಿರ್ವಹಿಸುವ ಗಾರ್ಮೆಂಟ್ಸ್‌ಗಳು, ಮಾಲ್ ಮತ್ತಿತರ ಕಡೆಗಳಲ್ಲಿ ಸದರಿಯವರುಗಳಿಗೆ ಸ್ವಯಂ ರಕ್ಷಣೆಯ ಬಗ್ಗೆ ಮಾಹಿತಿ ಹಾಗೂ ತರಬೇತಿಗಳನ್ನು ನೀಡಲಾಗಿರುತ್ತದೆ.
- ಬೆಂಗಳೂರು ನಗರದಲ್ಲಿ **"ಸೇಫ್ ಸಿಟಿ ಫಾರ್ ಸೇಫ್ಟಿ ಆಫ್ ವುಮೆನ್"** ಯೋಜನೆಯಡಿ ಮಹಿಳೆಯರ ಸುರಕ್ಷತೆಯ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-
    - ನಗರದ 1640 ಸ್ಥಳಗಳಲ್ಲಿ ಒಟ್ಟು 4100 ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.
    - ವಿವಿಧ ಸ್ಥಳಗಳಲ್ಲಿ ಒಟ್ಟು 30 ಸೇಫ್ಟಿ ಐಲ್ಯಾಂಡ್‌ಗಳನ್ನು ಗುರುತಿಸಲಾಗಿದೆ.
    - ಒಂದು ಮೊಬೈಲ್ ಕಮಾಂಡ್ ಅಂಡ್ ಕಂಟ್ರೋಲ್ ವಾಹನ ಖರೀದಿಸಿದ್ದು, ಇದಕ್ಕೆ ಅಗತ್ಯವಿರುವ ಫ್ಯಾಬ್ರಿಕೇಷನ್ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.
    - ಒಟ್ಟು 400 ಬಾಡಿ ವೋರ್ನ್ ಕ್ಯಾಮೆರಾಗಳನ್ನು ಖರೀದಿಸಲಾಗಿದೆ.
    - ವಿವಿಧ ಸ್ಥಳಗಳಲ್ಲಿ 96 ವೀಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಇವು ಕಾರ್ಯ ನಿರ್ವಹಣೆಯಲ್ಲಿವೆ.
    - 8 ಡ್ರೋನ್ ಕ್ಯಾಮೆರಾಗಳನ್ನು ಖರೀದಿಸಿ ಬಳಸಲಾಗುತ್ತಿದೆ.
- ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆ, ತ್ವರಿತ ನೆರವು ಸ್ಪಂದನೆಗಾಗಿ ನಿರ್ಭಯಾ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಒಟ್ಟು 1050 ಮಹಿಳಾ ಹೆಲ್ಪ್ ಡೆಸ್ಕ್ (Women Help Desk) ಗಳನ್ನು ಸ್ಥಾಪಿಸಲಾಗಿರುತ್ತದೆ.

- ಮಹಿಳೆಯರ ಮತ್ತು ಮಕ್ಕಳ ಕಳ್ಳ ಸಾಗಣೆ ತಡೆಗಟ್ಟುವ ಸಲುವಾಗಿ ಸದರಿ ಪ್ರಕರಣಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲು ರಾಜ್ಯದಲ್ಲಿ ಒಟ್ಟು 35 ಮಾನವ ಕಳ್ಳ ಸಾಗಣೆ ನಿಷೇಧ ಘಟಕ (Anti Human Trafficking Unit) ಗಳನ್ನು ಮಹಿಳಾ ಪೊಲೀಸ್ ಠಾಣೆಗಳಲ್ಲಿ ಸ್ಥಾಪಿಸಲಾಗಿರುತ್ತದೆ.
- ಸಂತ್ರಸ್ಥರ ಪರಿಹಾರ ನಿಧಿ ಅಡಿಯಲ್ಲಿ ನೊಂದ ಮಹಿಳಾ ಸಂತ್ರಸ್ಥರಿಗೆ ಸರ್ಕಾರದಿಂದ ನೀಡುವ ಸಹಾಯ ಧನವನ್ನು ಕರ್ನಾಟಕ ಕಾನೂನು ಸೇವಗಳ ಪ್ರಾಧಿಕಾರದಿಂದ ಒದಗಿಸುತ್ತಿದ್ದು ಅದಕ್ಕೆ ಪೊಲೀಸ್ ಇಲಾಖೆ ವತಿಯಿಂದ ಅಗತ್ಯ ದಾಖಲೆಗಳನ್ನು ಒದಗಿಸಲಾಗುತ್ತಿದೆ.

---

ಹೆಚ್‌ಡಿ 640 ಎಸ್‌ಎಸ್‌ಟಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು.